ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 : ಜೂನ್ 3, 2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಯ ತಾಂತ್ರಿಕ ನಿರ್ದೇಶನ ಸಮಿತಿಯ ಸಭೆಯ ಉದ್ಘಾಟನಾ ಸಮಾರಂಭ:<br>ಉದ್ಘಾಟನೆ:<br>ಶ್ರೀ ಟಿ. ಬಿ. ಜಯಚಂದ್ರ, ಕಾನೂನು ಹಾಗೂ ಪಶುಸಂಗೋಪನಾ ಸಚಿವರು.<br>ಅಧ್ಯಕ್ಷತೆ:<br>ಶ್ರೀ ಆಶಿಶ್ ಕುಮಾರ್, ಮಹಾ ನಿರ್ದೇಶಕರು, ಕೇಂದ್ರೀಯ ಸಾಂಖ್ಯಿಕ ಕಚೇರಿ ಹಾಗೂ ಅಧ್ಯಕ್ಷರು. ತಾಂತ್ರಿಕ ನಿರ್ದೇಶನ ಸಮಿತಿ.<br>ಸಂಪರ್ಕ:<br>ಶ್ರೀಮತಿ ಕೆ.ವಿ. ರೋಹಿಣಿ, ಸಹಾಯಕ ನಿರ್ದೇಶಕರು,<br>ಮೊ: **94818 73994** | **04–06–2015**<br>ಗುರುವಾರ<br>ಬೆಳಿಗ್ಗೆ<br>**10–30** ಗಂಟೆಗೆ | ವಿತ್ತೀಯ ನೀತಿ ಸಂಸ್ಥೆ, ಕೆಂಗೇರಿ, ಮೈಸೂರು ರಸ್ತೆ, ಬೆಂಗಳೂರು. |
| 2. | ಅ) ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದ ತಜ್ಞರ ಸಮಿತಿಯ ನೂತನ ಅಧ್ಯಕ್ಷ ಶ್ರೀ ವಿ.ಎಸ್. ಉಗ್ರಪ್ಪ ಅವರ ಅಧಿಕಾರ ಸ್ವೀಕಾರ.<br><br>ಆ) ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದ ತಜ್ಞರ ಸಮಿತಿಯ ಸಭೆ | **04–06–2015**<br>ಗುರುವಾರ<br>ಬೆಳಿಗ್ಗೆ<br>**11–30** ಗಂಟೆಗೆ<br><br>**04–06–2015**<br>ಗುರುವಾರ | ಕೊಠಡಿ ಸಂಖ್ಯೆ **338**, ಮೂರನೇ ಮಹಡಿ, ವಿಧಾನಸೌಧ, ಬೆಂಗಳೂರು<br><br>ಕೊಠಡಿ ಸಂಖ್ಯೆ **318**, ಮೂರನೇ ಮಹಡಿ, |

| | | | |
|---|---|---|---|
| | | ಅಪರಾಹ್ನ<br>12–00 ಗಂಟೆಗೆ | ವಿಧಾನಸೌಧ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಸಂಪಾದಕರ ಗಮನಕ್ಕೆ

ಕರ್ನಾಟಕ ರಾಜ್ಯ ಸರ್ಕಾರವು 2014–15 ನೇ ಸಾಲಿನ ಆಯವ್ಯಯದಲ್ಲಿ ಕಾರ್ಯನಿರತ ಪತ್ರಕರ್ತರು ಮತ್ತು ಅವರ ಕುಟುಂಬದವರಿಗೆ ಆರೋಗ್ಯ ವಿಮಾ ಯೋಜನೆಯನ್ನು ರೂಪಿಸಲಾಗುವುದು ಎಂದು ಘೋಷಿಸಿರುತ್ತದೆ. ಈ ಹಿನ್ನೆಲೆಯಲ್ಲಿ "ರಾಜೀವ್ ಆರೋಗ್ಯ ಭಾಗ್ಯ" ಯೋಜನೆಯನ್ನು ಮಾನ್ಯತೆ ಪಡೆದ ಪತ್ರಕರ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮಾಧ್ಯಮ ಪಟ್ಟಿಯಲ್ಲಿರುವ ಪತ್ರಿಕೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರನ್ನು ಯೋಜನೆಗೆ ಪ್ರಥಮ ಹಂತದಲ್ಲಿ ಸೇರಿಸಿಕೊಳ್ಳಲಾಗುವುದು.

ಈ ಸಂಬಂಧ ಬೆಂಗಳೂರಿನ ಮಾಧ್ಯಮ ಸಂಸ್ಥೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಹೆಸರುಗಳನ್ನು ಪೂರ್ಣ ವಿಳಾಸದೊಂದಿಗೆ ಈ ಕೆಳಕಂಡ ಮಾದರಿಯಲ್ಲಿ ಪಟ್ಟಿಮಾಡಿ ವಾರ್ತಾ ಇಲಾಖೆ ಸುದ್ದಿ ಮತ್ತು ಪತ್ರಿಕಾ ಶಾಖೆಗೆ ಕಳುಹಿಸುವಂತೆ ಕೋರಿದೆ.

ಯೋಜನೆಗೆ ಒಳಪಡುವ ಪತ್ರಕರ್ತರು, ಮಾಧ್ಯಮ ಸಂಸ್ಥೆ ಸೇರುವ ಸಂದರ್ಭದಲ್ಲಿ ಪಡೆದ ನೇಮಕಾತಿ ಪ್ರಮಾಣ ಪತ್ರ ಮತ್ತು ಇತ್ತೀಚಿನ ವೇತನ ಪ್ರಮಾಣ ಪತ್ರ ಹೊಂದಿರುವುದು ಕಡ್ಡಾಯವಾಗಿರುತ್ತದೆ.

ಸಂಪಾದಕರು, ಸುದ್ದಿ ಸಂಪಾದಕರು, ಮುಖ್ಯ ಉಪ ಸಂಪಾದಕರು, ಉಪ ಸಂಪಾದಕರು, ವರದಿಗಾರರು, ಬಾತ್ಮೀದಾರರು, ಬ್ಯೂರೋ ಚೀಫ್, ಕ್ಯಾಮೆರಾಮೆನ್, ಛಾಯಾಗ್ರಾಹಕ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಕರ್ತರ ಹೆಸರುಗಳನ್ನು ಮಾತ್ರ ಪಟ್ಟಿಯಲ್ಲಿ ನಮೂದಿಸುವಂತೆ ಕೋರಿದೆ.

ಈ ಕೆಳಕಂಡ ಮಾದರಿಯಲ್ಲಿ ಅರ್ಹ ಪತ್ರಕರ್ತರ ಪಟ್ಟಿಯನ್ನು ಸಂಸ್ಥೆಯ ಅಧಿಕೃತ ಮೊಹರು, ಸಹಿಯೊಂದಿಗೆ ಜೂನ್ 5 ರೊಳಗೆ ಕಳುಹಿಸುವಂತೆ ಕೋರಿದೆ.

# ರಾಜೀವ್ ಗಾಂಧಿ ಆರೋಗ್ಯ ಭಾಗ್ಯ ವಿಮಾ ಯೋಜನೆಗೆ ಒಳಪಡುವ ಅರ್ಹ ಪತ್ರಕರ್ತರ ಪಟ್ಟಿ

**ಪ್ರತಿನಿಧಿಸುವ ಮಾಧ್ಯಮ :**

**ಪತ್ರಿಕೆ ಮಾಧ್ಯಮ ಪಟ್ಟಿಗೆ ಸೇರಿದೆಯೇ ಅಥವಾ ಇಲ್ಲವೇ :**

ಶ್ರೀಮತಿ/ ಶ್ರೀ

| ಕ್ರಮ ಸಂಖ್ಯೆ | ಪತ್ರಕರ್ತರ ಹೆಸರು ಮತ್ತು ಹುದ್ದೆ | ವಿಳಾಸ :ನಿವಾಸ, ಕಚೇರಿ ಹಾಗೂ ದೂರವಾಣಿ ಹಾಗೂ ಇ-ಮೇಲ್ ವಿಳಾಸ | ಮಾನ್ಯತಾ ಪತ್ರ ಹೊಂದಿದ್ದಾರೆಯೇ ಅಥವಾ ಇಲ್ಲವೇ |
|---|---|---|---|
| 1 | | | |

# ಪತ್ರಿಕಾ ಪ್ರಕಟಣೆ

## ಸಾರಿಗೆ ಅದಾಲತ್

ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)

ಬೆಂಗಳೂರು ಇಂದಿರಾ ನಗರದ ಬಿ.ಡಿ.ಎ. ವಾಣಿಜ್ಯ ಸಂಕೀರ್ಣದಲ್ಲಿರುವ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯಲ್ಲಿ ಜೂನ್ 5 ರಂದು ಮಧ್ಯಾಹ್ನ 3-00 ಗಂಟೆಗೆ ಸಾರಿಗೆ ಅದಾಲತ್ ಏರ್ಪಡಿಸಲಾಗಿದೆ.

ಬಾಬು:ಜೆಪಿಆರ್.

## ಸಿನಿಮಾಟೊಗ್ರಫಿ, ಸೌಂಡ್ ರೆಕಾರ್ಡಿಂಗ್ ಡಿಪ್ಲೋಮಾ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)

ತಾಂತ್ರಿಕ ಶಿಕ್ಷಣ ಇಲಾಖೆಯ ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ ವತಿಯಿಂದ ಪ್ರಸಕ್ತ 2015-16 ನೇ ಸಾಲಿನ ಸಿನೆಮಾಟೊಗ್ರಫಿ ಮತ್ತು ಸೌಂಡ್ ರೆಕಾರ್ಡಿಂಗ್ ಅಂಡ್ ಇಂಜಿನಿಯರಿಂಗ್ ಡಿಪ್ಲೋಮೋ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಹೊರ ರಾಜ್ಯದ ಅಭ್ಯರ್ಥಿಗಳಿಗೆ ಸರ್ಕಾರಿ ಆದೇಶದಂತೆ ಶೇ 50 ರಷ್ಟು ಪ್ರವೇಶಾವಕಾಶ ಕಲ್ಪಿಸಲಾಗಿದೆ.

ಅಭ್ಯರ್ಥಿಗಳು ಕರ್ನಾಟಕ ದ್ವಿತೀಯ ಪಿ.ಯು.ಸಿ. ವಿಜ್ಞಾನ (ಪಿ.ಸಿ.ಎಂ.) ಅಥವಾ ತತ್ಸಮಾನ ಹಾಗೂ ಹೊರರಾಜ್ಯಗಳ ಅಭ್ಯರ್ಥಿಗಳು (+2) ತತ್ಸಮಾನ ಪರೀಕ್ಷೆಯಲ್ಲಿ ಎಲ್ಲಾ ವಿಷಯದಲ್ಲಿ ಒಟ್ಟಾರೆ ಶೇ 35 ಅಂಕ ಪಡೆದು ತೇರ್ಗಡೆಯಾಗಿರಬೇಕು. ಅರ್ಜಿಗಳನ್ನು ಪ್ರಾಂಶುಪಾಲರ ಕಚೇರಿ, ಸರ್ಕಾರಿ ಚಲನಚಿತ್ರ ಮತ್ತು ದೂರ್ದರ್ಶನ ಸಂಸ್ಥೆ, ಹೆಸರಘಟ್ಟ ಅಂಚೆ, ಬೆಂಗಳೂರು - 88 ಇಲ್ಲಿಂದ ರೂ 300/- (ಎಸ್‌ಸಿ/ಎಸ್‌ಟಿ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳು ರೂ 250/- ಗಳನ್ನು ಪಾವತಿಸಿ ಖುದ್ದಾಗಿ ಪಡೆಯಬಹುದು. ಅಥವಾ ಪ್ರಾಂಶುಪಾಲರ, ಸರ್ಕಾರಿ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆ, ಹೆಸರಘಟ್ಟ, ಬೆಂಗಳೂರು - 88, ಇವರ ಹೆಸರಿನಲ್ಲಿ ರೂ 375/- ಎಸ್‌ಸಿ/ಎಸ್‌ಟಿ ಮತ್ತು ಪ್ರವರ್ಗ-1 ರ ಅಭ್ಯರ್ಥಿಗಳು ರೂ 325/-) ಗಳ ಡಿ.ಡಿ.ಯನ್ನು ಕಳುಹಿಸಿ ಪಡೆಯಬಹುದು.

ಅರ್ಜಿ ನಮೂನೆಗಳನ್ನು ಪಡೆಯಲು ಮತ್ತು ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 16-06-2015 ಆಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ದೂರವಾಣಿ ಸಂ. 080-

**28466768, 28446672, ಅಥವಾ ಇ-ಮೇಲ್ gftihesaraghatta@gmail.com ಹಾಗೂ ವೆಬ್‌ಸೈಟ್ www.filminstitutebangalore.com ಅನ್ನು ಸಂಪರ್ಕಿಸಬಹುದಾಗಿದೆ.**
ಬಾಬು:ಜಿಪಿಆರ್.

## ತಾಂತ್ರಿಕ ನಿರ್ದೇಶನಾ ಸಮಿತಿ ಸಭೆ

**ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)**

**ಪಶುಸಂಗೋಪನೆಯ ಅಂಕಿ ಅಂಶಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ ತಾಂತ್ರಿಕ ನಿರ್ದೇಶನಾ ಸಮಿತಿ ಸಭೆಯು, ಪ್ರಮುಖ ಜಾನುವಾರು ಉತ್ಪನ್ನಗಳಾದ ಹಾಲು, ಮೊಟ್ಟೆ, ಮಾಂಸ ಮತ್ತು ಉಣ್ಣೆ ಉತ್ಪನ್ನಗಳ ಅಂದಾಜು ಉತ್ಪಾದನೆ ಹಾಗೂ ಮಾದರಿ ಸಮೀಕ್ಷೆ ಮತ್ತು ಜಾನುವಾರು ಗಣತಿಗೆ ಸಂಬಂಧಿತ ಅಂಶಗಳು ಮತ್ತು ಪಶುಸಂಗೋಪನಾ ವಲಯಕ್ಕೆ ಸಂಬಂಧಿಸಿದ ಅಂಕಿಅಂಶಗಳ ಕುರಿತು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳುವ ವೇದಿಕೆಯಾಗಿದೆ.**

**ಭಾರತ ಸರ್ಕಾರದ ಕೃಷಿ ಮಂತ್ರಾಲಯ, ಪಶುಸಂಗೋಪನೆ, ಹೈನುಗಾರಿಕೆ ಮತ್ತು ಮೀನುಗಾರಿಕೆ ಇಲಾಖೆ ವತಿಯಿಂದ ಪಶುಸಂಗೋಪನೆ ಮತ್ತು ಅಂಕಿಅಂಶಗಳನ್ನು ಅಭಿವೃದ್ಧಿಪಡಿಸುವ ಸಲುವಾಗಿ "ರಾಷ್ಟ್ರಮಟ್ಟದ ತಾಂತ್ರಿಕ ನಿರ್ದೇಶನಾ ಸಮಿತಿ ಸಭೆ" ಯನ್ನು ಪ್ರತಿ ವರ್ಷ ನಡೆಸಲಾಗುತ್ತಿದ್ದು ಈ ಸಭೆಯು ಎಲ್ಲಾ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಪಶುಸಂಗೋಪನಾ ಇಲಾಖೆಯ ನಿರ್ದೇಶಕರುಗಳು ಮತ್ತು ಅಂಕಿಅಂಶ ವಿಭಾಗದ ಅಧಿಕಾರಿಗಳನ್ನು ಒಳಗೊಂಡು ರಚಿಸಲಾಗಿರುತ್ತದೆ. ಸಾಮಾನ್ಯವಾಗಿ ಟಿ.ಸಿ.ಡಿ. ಸಭೆಯನ್ನು ವಿವಿಧ ರಾಜ್ಯಗಳಲ್ಲಿ ಕೈಗೊಳ್ಳಲಾಗುತ್ತಿದ್ದು, ಸಮಿತಿಯ ಸದಸ್ಯರುಗಳು ಸಂಪೂರ್ಣವಾಗಿ ಭಾಗವಹಿಸಿ ಯಶಸ್ವಿ ನಿರ್ಣಯಗಳನ್ನು ಕೈಗೊಳ್ಳಲಾಗುತ್ತಿದೆ.**

**ಪ್ರಮುಖ ಜಾನುವಾರು ಉತ್ಪನ್ನಗಳ ಉತ್ಪಾದನೆ ಮತ್ತು ಅವುಗಳ ಬಳಕೆಯ ವಿಧಾನದ ಅಧ್ಯಯನವಲ್ಲದೇ ಆರ್ಥಿಕ ಅಭಿವೃದ್ಧಿಯು ಅವಲಂಬಿಸಿರುವ ಪಶುಸಂಗೋಪನಾ ವಲಯದ ಅಂಕಿಅಂಶಗಳ ಮಾಹಿತಿಯನ್ನು ಅಭಿವೃದ್ಧಿಪಡಿಸಲು ಅವಶ್ಯವಿರುವ ಪರಿಹಾರ ಮತ್ತು ವಿಧಾನಗಳ ಕುರಿತಂತೆ ಚರ್ಚಿಸಲಾಗುವುದು.**

**2015-16ನೇ ಸಾಲಿನಲ್ಲಿ ಭಾರತ ಸರ್ಕಾರವು ರಾಷ್ಟ್ರಮಟ್ಟದ ತಾಂತ್ರಿಕ ನಿರ್ದೇಶನಾ ಸಮಿತಿ ಸಭೆಯನ್ನು ದಿನಾಂಕ 4 ಮತ್ತು 5ನೇ ಜೂನ್ 2015 ರಂದು ವಿತ್ತೀಯ ಕಾರ್ಯನೀತಿ ಸಂಸ್ಥೆ ಕೆಂಗೇರಿ, ಮೈಸೂರು ರಸ್ತೆ, ಬೆಂಗಳೂರಿನಲ್ಲಿ ನಡೆಸುತ್ತಿದೆ.**

**ಬಾಬು:ಜಿಪಿಆರ್.**

## ಡಿ. ದೇವರಾಜು ಅರಸು ಅವರ 33ನೇ ಪುಣ್ಯಸ್ಮರಣೆ

**ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)**

ಶೋಷಿತರ ಸಮಗ್ರ ಅಭಿವೃದ್ಧಿಯ ಹರಿಕಾರ, ಡಿ. ದೇವರಾಜ ಅರಸು ಅವರ 33ನೇ ಪುಣ್ಯ ಸ್ಮರಣೆಯನ್ನು ಜೂನ್ 6 ರಂದು ಬೆಳಿಗ್ಗೆ 10-00 ಗಂಟೆಗೆ ವಿಧಾನಸೌಧದ ಪಶ್ಚಿಮ ದ್ವಾರದ ಮುಂಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ.

ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ಮಾಜಿ ಮುಖ್ಯಮಂತ್ರಿ ದಿ. ದೇವರಾಜು ಅರಸು ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡುವರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶ್ರೀ ಹೆಚ್. ಆಂಜನೇಯ ಅವರು ಉಪಸ್ಥಿತರಿರುವರು.
ಬಾಬು:ಜಿಪಿಆರ್.

## ಪುಟ್ಟಣ್ಣ ಕಣಗಾಲ್ ಸವಿನೆನಪು ಸಮಾರಂಭ

**ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಇಲಾಖೆಯ ಸಹಯೋಗದಲ್ಲಿ ಜೂನ್ 5 ರಂದು ಸಂಜೆ 6–00 ಗಂಟೆಗೆ ನಗರದ ಭಗವಾನ್ ಮಹಾವೀರ್ ರಸ್ತೆ, ವಾರ್ತಾ ಸೌಧದಲ್ಲಿರುವ "ಸುಲೋಚನಾ ಸಭಾಂಗಣ" ದಲ್ಲಿ ಹಿರಿಯ ಕನ್ನಡ ಚಲನ ಚಿತ್ರ ನಿರ್ದೇಶಕ "ಪುಟ್ಟಣ್ಣ ಕಣಗಾಲ್ ಸವಿನೆನಪು" ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಹೆಚ್. ಬಿ. ದಿನೇಶ್ ತಿಳಿಸಿದ್ದಾರೆ.

ಸಮಾರಂಭದಲ್ಲಿ ಮೂಲ ಸೌಲಭ್ಯ ಅಭಿವೃದ್ಧಿ, ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್, ವಸತಿ ಸಚಿವ ಡಾ. ಅಂಬರೀಷ್, ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ ಎನ್. ನಾಗಾಂಬಿಕಾ ದೇವಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಥಾಮಸ್ ಡಿ ಸೋಜಾ, ಹಿರಿಯ ಕಲಾವಿದರಾದ ಪದ್ಮವಿಭೂಷಣ ಡಾ ಬಿ. ಸರೋಜಾದೇವಿ, ಶ್ರೀಮತಿ ಲೀಲಾವತಿ, ಡಾ. ಜಯಂತಿ, ಡಾ. ಭಾರತಿ ವಿಷ್ಣುವರ್ಧನ್, ಡಾ. ಶ್ರೀನಾಥ್, ಶ್ರೀಮತಿ ನಾಗಲಕ್ಷ್ಮಿ ಪುಟ್ಟಣ್ಣ ಕಣಗಾಲ್ ಹಾಗೂ ಕುಟುಂಬ ವರ್ಗದವರು ಸೇರಿದಂತೆ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಶ್ರೀ ಎಸ್. ವಿ. ರಾಜೇಂದ್ರಸಿಂಗ್ ಬಾಬು ಅವರು ಉಪಸ್ಥಿತರಿರುವರು.

ಪುಟ್ಟಣ್ಣ ಕಣಗಾಲ್ ಕನ್ನಡ ಚಿತ್ರೋದ್ಯಮದಲ್ಲಿ ನಿರ್ದೇಶಕರಿಗೆ ತಾರಾ ವರ್ಚಸ್ಸು ತಂದುಕೊಟ್ಟ ಚಲನಚಿತ್ರ ನಿರ್ದೇಶಕ. ಕನ್ನಡದ ಅನೇಕ ಮಹತ್ವದ ಕಾದಂಬರಿಗಳನ್ನು ಚಿತ್ರಮಾಧ್ಯಮಕ್ಕೆ ತಂದು ಜನಪ್ರಿಯ ಚಿತ್ರಗಳನ್ನು ತೆರೆಗಿತ್ತ ಪುಟ್ಟಣ್ಣ ಹಲವಾರು ಕಲಾವಿದರನ್ನು ರೂಪಿಸಿದರು.

ನಾಡು ಕಂಡ ಪ್ರತಿಭಾನ್ವಿತ ಚಿತ್ರ ನಿರ್ದೇಶಕರಲ್ಲೊಬ್ಬರಾದ ಪುಟ್ಟಣ್ಣ ಕಣಗಾಲ್ ಬಹುಕಾಲ ನೆನಪಲ್ಲಿ ಉಳಿಯುವಂತಹ ಚಿತ್ರಗಳನ್ನು ದಿಗ್ದರ್ಶಿಸಿದವರು ಎಂದು ಶ್ರೀ ಹೆಚ್.ಬಿ. ದಿನೇಶ್ ತಿಳಿಸಿದ್ದಾರೆ.
ಬಾಬು:ಜಿಪಿಆರ್.

## ದೃಶ್ಯ ಮಾಧ್ಯಮಗಳಲ್ಲಿ ಕನಕದಾಸರು : ಅಭಿವ್ಯಕ್ತಿ ಆಯಾಮಗಳು ಒಂದು ದಿನದ ವಿಚಾರ ಸಂಕಿರಣ

**ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)**

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಸೇರಿ ಜೂನ್ 6 ರಂದು ಬೆಂಗಳೂರಿನ ಬಾದಾಮಿ ಹೌಸ್‌ನ ಪ್ರಿಯದರ್ಶಿನಿ ಸಭಾಂಗಣದಲ್ಲಿ "ದೃಶ್ಯ ಮಾಧ್ಯಮಗಳಲ್ಲಿ ಕನಕದಾಸರು: ಅಭಿವ್ಯಕ್ತಿ ಆಯಾಮಗಳು" ವಿಷಯದ ಮೇಲೆ ಒಂದು ದಿನದ ವಿಚಾರ ಸಂಕಿರಣವನ್ನು ಏರ್ಪಡಿಸಿದೆ.

ಕನಕದಾಸರು ಪ್ರಧಾನವಾಗಿ ಭಕ್ತ ಎಂದು ಗುರುತಿಸಿದ್ದರೂ ವಾಸ್ತವವಾಗಿ ಅವರೊಬ್ಬ ಹಲವು ಅಭಿವ್ಯಕ್ತಿಗಳನ್ನೊಳಗೊಂಡ ಮಹಾಸಂತಕವಿ, ತಿಮ್ಮಪ್ಪ, ತಿಮ್ಮಪ್ಪನಾಯಕ, ಕನಕಪ್ಪ, ಕನಕನಾಯಕ ಹಾಗೂ ಕನಕದಾಸರಾಗಿ ಹಂತ ಹಂತವಾಗಿ ಬದುಕಿನ ಸ್ಥಿತ್ಯಂತರಗಳಿಗೆ ಮುಖಾಮುಖಿಯಾಗುತ್ತಲೇ ಪಾರಮಾರ್ಥಿಕ ಚಿಂತನೆ, ಸಾಮಾಜಿಕ ಕಾಳಜಿಗಳನ್ನು ತಮ್ಮ ಕಾವ್ಯ-ಕೀರ್ತನೆಗಳಲ್ಲಿ ನಿರೂಪಿಸಿದ ದಾರ್ಶನಿಕ ಕವಿ, ಇತರೆ ಹರಿದಾಸರು, ಬರೀ ಕೀರ್ತನೆಗಳನ್ನಷ್ಟೇ ರಚಿಸಿದ್ದರೆ, ಕನಕದಾಸರು ಮೋಹನ ತರಂಗಿಣಿ, ನಳಚಿತ್ರೆ, ಹರಿಭಕ್ತಿಸಾರ, ರಾಮಧಾನ್ಯಚರಿತ ಎಂಬ ನಾಲ್ಕು ಕಾವ್ಯಗಳ ಜೊತೆಗೆ 300 ಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿ, ಭಕ್ತಿಯನ್ನು ಕೇವಲ ಸಂಚಾರಿ ಭಾವದಲ್ಲಿ ತೊಡಗಿಸಿ, ಸಾಮಾಜಿಕ ತಲ್ಲಣಗಳನ್ನು ಸ್ಥಾಯಿ ಭಾವದಲ್ಲಿ ನಿರ್ವಹಿಸಿದ ಒಬ್ಬ ಕ್ರಾಂತಿಕಾರಿ ಮನೋಧರ್ಮದ ಚಿಂತಕರಾಗಿ ನಮಗೆ ಕಾಣುತ್ತಾರೆ.

ಇಂತಹ ಚಿಂತಕ ಸಂತಕವಿಯ ಕುರಿತಂತೆ 60 ರ ದಶಕದಿಂದಲೂ ಈವರೆಗೆ ದೃಶ್ಯ ಮಾಧ್ಯಮದಲ್ಲಿ ಹೇಗೆ ಕಂಡಿರಸಲಾಗಿದೆ ಎಂಬುದನ್ನು ವಿವೇಚಿಸುವ ಆಶಯ ಈ ಸಂಕಿರಣದ್ದಾಗಿದೆ. ಆದ್ದರಿಂದ 60 ರದಶಕದಲ್ಲಿ ಮೂಡಿಬಂದ ಭಕ್ತ ಕನಕದಾಸ ಚಲನಚಿತ್ರ ಹಾಗೂ 60 ರ ದಶಕದಿಂದಲೂ 20ನೇ ಶತಮಾನದವರೆಗೆ ಕನಕದಾಸರ ಕುರಿತು ಬಂದ 18 ನಾಟಕಗಳಿಗೂ ಹೆಚ್ಚು ಕೃತಿಗಳು ನಮ್ಮಲ್ಲಿ ಲಭ್ಯವಿದೆ. ಈ ಸಿನಿಮಾ ಮತ್ತು ನಾಟಕ ಕೃತಿಗಳಲ್ಲಿ ಆಯಾ ಕಾಲಘಟ್ಟದಲ್ಲಿ ಕನಕದಾಸರನ್ನು ಭಕ್ತನಾಗಿ, ದಾರ್ಶನಿಕನಾಗಿ, ಕವಿಯಾಗಿ, ಸಮಾಜ ಸುಧಾರಕನಾಗಿ – ಹೀಗೆ ನಮ್ಮ ದೃಶ್ಯ ಮಾಧ್ಯಮ ಹೇಗೆ ಅಭಿವ್ಯಕ್ತಿಸಿದೆ ಎಂಬುದನ್ನು 3 ಗೋಷ್ಠಿಗಳಲ್ಲಿ ಪರಿಶೀಲಿಸಲಾಗುವುದು.

ಬೆಳಿಗ್ಗೆ 9 ರಿಂದ 11 ರವರೆಗೆ ' ಭಕ್ತ ಕನಕದಾಸ' ಚಲನಚಿತ್ರ ಪ್ರದರ್ಶನ ವೀಕ್ಷಣೆ ಏರ್ಪಡಿಸಿದ್ದು, ತರುವಾಯ "ದೃಶ್ಯ ಮಾಧ್ಯಮಗಳು ಅಭಿವ್ಯಕ್ತಿ ಕ್ರಮ-ಚಾರಿತ್ರಿಕ ನೋಟ' ಎಂಬ ವಿಷಯವನ್ನು ಹಿನ್ನೆಲೆಯಾಗಿರಿಸಿಕೊಂಡು ಡಾ. ಕೆ. ಪುಟ್ಟಸ್ವಾಮಿ ಅವರು ವಿಷಯ ಮಂಡಿಸುತ್ತಾರೆ. ನಂತರ ಚಲನಚಿತ್ರ ಕುರಿತು ಅದರಲ್ಲಿ 'ಸಾಹಿತ್ಯ ಮತ್ತು ಸಾಮಾಜಿಕ ಹೊಣೆಗಾರಿಕೆ' ಎಂಬ ವಿಚಾರ ಕುರಿತು ಪ್ರೊ. ಎಸ್. ಜಿ. ಸಿದ್ಧರಾಮಯ್ಯ "ಕನಕರ ವ್ಯಕ್ತಿ ಚಿತ್ರಣ' ಕುರಿತು ಶ್ರೀ ಎನ್.ಆರ್. ನಂಜುಂಡೇಗೌಡ, 'ಚಿತ್ರ ಸಾಹಿತ್ಯ ವಿಮರ್ಶೆ' ಕುರಿತು ಡಾ. ಬಿ.ಕೆ. ರವಿ ಇವರುಗಳು ವಿಷಯಗಳನ್ನು ಚರ್ಚೆಗೆ ಅನುವಾಗುವ ರೀತಿಯಲ್ಲಿ ನಿರೂಪಿಸುವರು. ಮಧ್ಯಾಹ್ನ ಕನಕದಾಸರ ಕುರಿತ ರಂಗರೂಪಕಗಳ ಪೈಕಿ 3 ನಾಟಕಗಳ ಕಿರುದೃಶ್ಯಗಳನ್ನು ಪ್ರದರ್ಶಿಸಿ ವಿಷಯ ಮಂಡನೆ ನಡೆಯಲಿದೆ. ಮಂಡಿಸಿದ ವಿಷಯವನ್ನು ಕೇಂದ್ರವಾಗಿರಿಸಿಕೊಂಡು 'ಕನಕ ವ್ಯಕ್ತಿತ್ವ ಪ್ರತಿಪಾದನೆ' ಕುರಿತು ಡಾ. ಕುಂಸಿ ಉಮೇಶ್, 'ಸಾಮಾಜಿಕ ಸಂವೇದನೆ' ಕುರಿತು ಡಾ. ಕು. ಶಿವರಾಮ ಶೆಟ್ಟಿ, 'ತಾಂತ್ರಿಕ ನಿರ್ವಹಣೆ' ಕುರಿತು ಶಶಿಧರ ಭಾರಿಘಾಟ್ ಇವರುಗಳು ವಿಷಯ ಮಂಡಿಸಿ ವಿಭಿನ್ನ ನೆಲೆಗಳಲ್ಲಿ ಮಂಡಿಸಲಾದ ವಿಷಯದ ಬಗ್ಗೆ ಸಂವಾದ ನಡೆಸಿಕೊಡುವರು.

ಈ ಸಂವಾದದಲ್ಲಿ ಸಾಹಿತ್ಯ, ಚಲನಚಿತ್ರ ಹಾಗೂ ರಂಗಭೂಮಿ ಕ್ಷೇತ್ರದ 27 ಜನ ಪರಿಣಿತರು ಭಾಗವಹಿಸುತ್ತಾರೆ. ಈ ಗೋಷ್ಠಿಯ ಅಧ್ಯಕ್ಷತೆಯನ್ನು ಚಿಂತಕರಾದ ಡಾ ಕೆ. ಮರುಳಸಿದ್ದಪ್ಪ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ರಾಜೇಂದ್ರಸಿಂಗ್ ಬಾಬು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ಉಪಸ್ಥಿತರಿರುತ್ತಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಹಾಗೂ ಕನಕದಾಸ ಅಧ್ಯಯನ ಕೇಂದ್ರದ ಸಮನ್ವಯಾಧಿಕಾರಿ ಕಾ.ತ. ಚಿಕ್ಕಣ್ಣ ತಿಳಿಸಿದ್ದಾರೆ.

ಬಾಬು:ಜಿಪಿಆರ್.

ಛಾಯಾಚಿತ್ರ ಶೀರ್ಷಿಕೆ:

ಮೂಲ ಸೌಲಭ್ಯ ಅಭಿವೃದ್ಧಿ, ವಾರ್ತೆ ಮತ್ತು ಸಾರ್ವಜನಿಕ ಸಂಪರ್ಕ ಹಾಗೂ ವಕ್ಫ್ ಖಾತೆ ಸಚಿವರಾದ ಶ್ರೀ ಆರ್. ರೋಷನ್ ಬೇಗ್ ಅವರು ಇಂದು ಬೆಂಗಳೂರಿನ ವಿಧಾನಸಭಾ ಮತ ಕ್ಷೇತ್ರದರ್ಶನದಲ್ಲಿ ಸ್ಥಳೀಯ ಅಧಿಕಾರಿಗಳು ಮತ್ತು ಮುಖಂಡರೊಂದಿಗೆ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿದರು.

# ವಿಧಾನ ಸಭೆ ಕಾರ್ಯದರ್ಶಿಯಾಗಿ ಎಂ. ಗುರುರಾಜ

**ಬೆಂಗಳೂರು, ಜೂನ್ 3 (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನ ಸಭೆ ಸಚಿವಾಲಯದ ಅಪರ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಎಂ. ಗುರುರಾಜ ಅವರಿಗೆ ವಿಧಾನ ಸಭೆಯ ಕಾರ್ಯದರ್ಶಿಯಾಗಿ ಬಡ್ತಿ ನೀಡಲಾಗಿದೆ.

ಕರ್ನಾಟಕ ವಿಧಾನ ಸಭೆ ಸಚಿವಾಲಯದ ಅಪರ ಕಾರ್ಯದರ್ಶಿಯಾಗಿ ಶ್ರೀ ಜಯತೀರ್ಥ ಪಿ. ಗಲಗಲಿ ಅವರಿಗೆ, ಉಪ ಕಾರ್ಯದರ್ಶಿಯಾಗಿದ್ದ ಶ್ರೀ  ಮಲ್ಲಪ್ಪ ಬಿ. ಕಾಳೆ ಅವರಿಗೆ ಜಂಟಿ ಕಾರ್ಯದರ್ಶಿ ಹೆಚ್ಚಿನ ಪ್ರಭಾರ ಶ್ರೀಮತಿ ಎಂ.ಕೆ ವಿಶಾಲಾಕ್ಷಿ ಅವರಿಗೆ ಜಂಟಿ ಕಾರ್ಯದರ್ಶಿಯಾಗಿ, ಶ್ರೀಮತಿ ಮುನಿರುನ್ನೀಸಾ ಮತ್ತು ಶ್ರೀ ನಜೀರ್ ಅಹಮದ್ ಅವರುಗಳಿಗೆ ಉಪ ಕಾರ್ಯದರ್ಶಿಯಾಗಿ ಹಾಗೂ ಶ್ರೀ ಕೆ. ಮೊಹಮ್ಮದ್ ಗೌಸ್ ಮತ್ತು ಶ್ರೀಮತಿ ಎಸ್.ಎಲ್. ಶ್ಯಾಮಲಾ ಅವರುಗಳಿಗೆ ಅಧೀನ ಕಾರ್ಯದರ್ಶಿಯಾಗಿ ಮುಂಬಡ್ತಿ ನೀಡಲಾಗಿದೆ ಎಂದು ಕರ್ನಾಟಕ ವಿಧಾನ ಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಬಾಬು/ಕೆಎಂ